# ರಣಬೀರ್ ಏರಿಳಿತ



‘ಬರ್ಫಿ’ ಚಿತ್ರದ ಮೂಲಕ ಆಸ್ಕರ್ ಪ್ರಶಸ್ತಿಯ ಬಾಗಿಲು ತಟ್ಟಿದ್ದ ರಣಬೀರ್ ಕಪೂರ್‌ನಿಗೆ ನಿರಾಶೆಯ ಸುದ್ದಿ ಬಂದಿದೆ. ವಿದೇಶಿ ಚಿತ್ರಗಳ ವಿಭಾಗದಲ್ಲಿ ಭಾರತದ ಅಧಿಕೃತ ಎಂಟ್ರಿಯಾಗಿದ್ದ ‘ಬರ್ಫಿ’ ಮೊದಲ ಸುತ್ತಿನಲ್ಲೇ ಸ್ಪರ್ಧೆಯಿಂದ ಹೊರಬಿದ್ದಿದೆ. ಒಟ್ಟು 78 ಸಿನಿಮಾಗಳು ಈ ವಿಭಾಗದಲ್ಲಿ ಎಂಟ್ರಿ ಪಡೆದಿದ್ದು ಅವುಗಳಲ್ಲಿ 9 ಸಿನಿಮಾಗಳು ಮಾತ್ರ ಮುಂದಿನ ಸುತ್ತಿಗೆ ಆಯ್ಕೆಯಾಗಿವೆ. ಅದರಲ್ಲಿ ‘ಬರ್ಫಿ’ ಇಲ್ಲ.

ಹಾಗೆ ನೋಡಿದರೆ ‘ಬರ್ಫಿ’ ಚಿತ್ರವನ್ನು ಭಾರತದ ಎಂಟ್ರಿ ಎಂದು ಆಯ್ಕೆ ಮಾಡಿದಾಗಲೇ ಭಿನ್ನಮತ ವ್ಯಕ್ತವಾಗಿತ್ತು. ಚಿತ್ರಗಳ ವಿಶಿಷ್ಟ ನಿರೂಪಣೆಯ ಹಿನ್ನೆಲೆಯಲ್ಲಿ ಇರ್ಫಾನ್ ಖಾನ್ ನಟಿಸಿದ ‘ಪಾನ್‌ಸಿಂಗ್ ತೋಮರ್’ ಮತ್ತು ವಿದ್ಯಾ ಬಾಲನ್ ನಟಿಸಿದ ‘ಕಹಾನಿ’ ಚಿತ್ರಗಳಲ್ಲಿ ಒಂದನ್ನು ಆಸ್ಕರ್ ನಾಮಕರಣಕ್ಕೆ ಆಯ್ಕೆ ಮಾಡಬೇಕಿತ್ತು ಎಂದು ಆಗಲೇ ವಿಮರ್ಶಕರು ಹೇಳಿದ್ದರು. ಆದರೆ ಅದು ಹೇಗೊ ‘ಬರ್ಫಿ’ ಆಯ್ಕೆಯಾಯಿತು. ‘ಇದು ತಿರಸ್ಕೃತವಾಗುತ್ತದೆಂದು ಮೊದಲೇ ಗೊತ್ತಿತ್ತು’ ಎನ್ನುವುದು ಈಗ ಬಾಲಿವುಡ್ ಪಂಡಿತರ ಮಾತು.

ಅದೇನೇ ಇದ್ದರೂ ರಣಬೀರ್ ವೃತ್ತಿಜೀವನದ ಗ್ರಾಫ್ ಒಂದೇ ಸಮನೆ ಏರುತ್ತಿದೆ. ‘ಬರ್ಫಿ’ ಮುಂದಿನ ತಿಂಗಳು ನಡೆಯಲಿರುವ ‘ಫಿಲಂಫೇರ್’ ಪ್ರಶಸ್ತಿಗೆ ಪ್ರಬಲ ಸ್ಪರ್ಧೆ ಒಡ್ಡಲಿದೆ ಎನ್ನುವ ನಿರೀಕ್ಷೆ ಇದೆ. ಈ ಮಧ್ಯೆ ಇಮ್ತಿಯಾಜ್ ಅಲಿ ನಿರ್ದೇಶನದ ಹೊಸ ಚಿತ್ರಕ್ಕೆ ಕತ್ರೀನಾ ಕಪೂರ್‌ಗೆ ಜೋಡಿಯಾಗಿ ರಣಬೀರ್ ಆಯ್ಕೆಯಾಗಿರುವ ಸುದ್ದಿ ಬಂದಿದೆ. ಈಗಾಗಲೆ ‘ರಾಜ್‌ನೀತಿ’ ಮತ್ತು ‘ಅಜಬ್ ಪ್ರೇಮ್ ಕಿ..’ ಎಂಬ ಚಿತ್ರಗಳಲ್ಲಿ ಗಮನ ಸೆಳೆದಿರುವ ಈ ಜೋಡಿ ಮತ್ತೆ ಮೂರನೇ ಬಾರಿಗೆ ಒಟ್ಟಾಗುತ್ತಿದೆ. ಆರಂಭದಲ್ಲಿ ಕತ್ರೀನಾಳ ಪ್ರೇಮಿಯಾಗಿ ಸುದ್ದಿ ಮಾಡಿದ್ದ ರಣಬೀರ್ ಬಳಿಕ ಆಕೆಯಿಂದ ದೂರವಾಗಿದ್ದ. ಈಗ ಮತ್ತೆ ಈ ಜೋಡಿಯ ಸುದ್ದಿಗೆ ರೆಕ್ಕೆಪುಕ್ಕಗಳು ಹುಟ್ಟಿಕೊಂಡಿವೆ. ಹೊಸ ವರ್ಷಕ್ಕೆ ಮುನ್ನ ಬ್ಲಾಕ್‌ಬೆರ್ರಿ ಮೊಬೈಲ್‌ನ ‘ಬ್ರಾಂಡ್ ಅಂಬಾಸಿಡರ್’ ಆಗಿ ಆಯ್ಕೆಯಾಗಿರುವ ರಣಬೀರ್ ಜಾಹೀರಾತು ಕ್ಷೇತ್ರದಲ್ಲೂ ಸಖತ್ ಮಿಂಚುತ್ತಿದ್ದಾನೆ.

■ ಬಿಂದು


